# ಸೀರಿಯಲ್‌ಗಳಲ್ಲಿ ಒತ್ತಡವೇ ಮಿತಿ

**ಮುನಿರಾಜ್**
**ಉದಯದ 'ಜನನಿ'ಯ ಧರ್ಮರಾಜ್**



◆ **ನಿಮ್ಮ ಪರಿಚಯ ಹೇಳಿ**

ಪ್ರೀತಿಯಿಂದ ಮುನಿ ಎಂದೇ ಕರೆಯುತ್ತಾರೆ. ಶ್ರೀನಗರ ಮುನಿ ಎಂದೂ ಕೆಲವರು ಕರೀತಾರೆ. ಕನ್ನಡ ತೆಲುಗು ಸಿನಿಮಾಗಳಲ್ಲಿ ನಟನೆ ಆರಂಭಿಸಿದ ಸಂದರ್ಭದಲ್ಲಿ ಮುನಿಶ್ ರಾಜ್ ಎಂದಾಗಿತ್ತು. ನಮ್ಮ ಪೋಷಕರಿಗೆ ಐದನೇ ಮಗ. ಮೂವರು ಅಕ್ಕಂದಿರು, ಒಬ್ಬ ಅಣ್ಣ ಇದ್ದಾರೆ. ಮೂಲತಃ ಬೆಂಗಳೂರಿನ ಶ್ರೀನಗರ. ಅದರ ಮೂಲ ಹೆಸರು ದಾಸರಹಳ್ಳಿ. ನಮ್ಮದು ಕೃಷಿ ಕುಟುಂಬ. ಹಸುಗಳ ಒಡನಾಟದಲ್ಲೇ ಬೆಳೆದೆ. ಎಸ್‌ಎಸ್‌ಎಲ್‌ಸಿ ಮುಗಿದ ತಕ್ಷಣ ವಿಜಯಾ ಸಂಜೆ ಕಾಲೇಜಿಗೆ ಸೇರಿದೆ. ಅಲ್ಲೆ ಕೆಲಸವೂ ಸಿಕ್ಕಿತು.

◆ **ಕಲೆಯ ಅಭಿರುಚಿ ಮೂಡಿದ್ದು ಹೇಗೆ?**

ನಮ್ಮ ತಂದೆ ಜನಪದ, ರಂಗಭೂಮಿಯ ಕಲಾವಿದರು. ಬೆಂಗಳೂರಿನ ಒಳಗೆ ಹಳ್ಳಿಯ ಸೊಗಡು ಆಗ ಹೆಚ್ಚಿತ್ತು. ಅವರೇ ಪಟ್ಟಿ ಹಾಕಿ ಪೌರಾಣಿಕ ನಾಟಕಗಳನ್ನು ಆಡುತ್ತಿದ್ದರು. ನಮಗೂ ಆಗ ಮನರಂಜನೆಗೆ ಅದುವೇ ಪ್ರಮುಖ ಮಾಧ್ಯಮ. ನಾಟಕ ನೋಡುತ್ತಿದ್ದ ನನ್ನಲ್ಲೂ ಪ್ರೇರಣೆ ನೀಡಿ ನಟಿಸಬೇಕು ಎನ್ನುವ ಆಸೆಯನ್ನು ಹುಟ್ಟಿಸಿತ್ತು. ಆದರೆ ರಂಗವನ್ನು ಹತ್ತಲು ಭಯ. ಹಾಗಾಗಿ ಅದು ಸಾಧ್ಯ ಆಗಲಿಲ್ಲ. ಪಿಯುಸಿ ತನಕ ಪ್ರಯತ್ನಿಸುವ ಧೈರ್ಯವೂ ಬರಲಿಲ್ಲ. 'ಅಭಿನಯ ತರಂಗ' ರಂಗ ತಂಡದಲ್ಲಿ ಹೇಗೋ ಗುರುತಿಸಿಕೊಂಡೆ. ನಂತರ ಹಲವು ತಂಡಗಳಲ್ಲಿ ನಾಟಕ ಮಾಡಲು ಸಾಧ್ಯ ಆಯಿತು. ನಾಟಕದ ಗೀಳು ಹೆಚ್ಚಾಯಿತು. 'ಗೋಧೂಳಿ' ಮೂಲಕ ಧಾರಾವಾಹಿಗೆ ಬಂದೆ. ಎಸ್. ನಾರಾಯಣ್ 'ಸುಮತಿ'ಗೆ ಕರೆದುಕೊಂಡರು. ನಂತರ ಉದಯದಲ್ಲಿ 'ಮಾಂಗಲ್ಯ' ಮಾಡಿದೆ. ಅದರ ಯಶಸ್ಸು ಸಿನಿಮಾಗಳಲ್ಲಿ ದೊಡ್ಡ ಅವಕಾಶವನ್ನು ನೀಡಿತು. 'ಯಶವಂತ' ನನ್ನ ಮೊದಲ ಸಿನಿಮಾ. ಬೇರೆ ಬೇರೆ ಸಿನಿಮಾಗಳಲ್ಲಿ ಪ್ರಮುಖ ನಟರ ಜೊತೆ ನಟಿಸಿದ್ದೇನೆ. ಕ್ರಮೇಣ ಸಿನಿಮಾ ಹೆಚ್ಚಾಗಿದ್ದರಿಂದ ಸೀರಿಯಲ್ ಮಾಡಲು ಆಗುತ್ತಿರಲಿಲ್ಲ. ಕೋವಿಡ್ ನಂತರ 'ನಾಗಿಣಿ'ಯಲ್ಲಿ ಮಾಡಿದೆ. ಒಳ್ಳೆಯ ಕಾಲದಲ್ಲಿ ಅವಕಾಶ ಕೊಟ್ಟರು. ಈಗ 'ಜನನಿ'ಯಲ್ಲಿ ನಟಿಸುತ್ತಿದ್ದೇನೆ.

◆ **ಧರ್ಮರಾಜ್ ಪಾತ್ರದ ಬಗ್ಗೆ ಹೇಳುವುದಾದರೆ.**

ವಿಲನ್ ಪಾತ್ರ. ಒಳ್ಳೆಯ ಕಲಾವಿದರಿಗೆ ಸಿಗಬೇಕಾದಂತಹ ಪಾತ್ರ. ಅದೃಷ್ಟಕ್ಕೆ ಅದು ನನಗೆ ಸಿಕ್ಕಿದೆ. ತುಂಬ ಖುಷಿಯಿಂದ ಅದನ್ನು ಮಾಡುತ್ತಿದ್ದೇನೆ. ಖಳ ಆದರೂ ಒಳ್ಳೆಯತನ ಅವನಲ್ಲಿ ಇದೆ. ಈ ಪಾತ್ರವನ್ನು ವೀಕ್ಷಕರು ಹೆಚ್ಚು ದ್ವೇಷಿಸುತ್ತಾರೆ. ಏಕೆಂದರೆ ಒಂದು ರೀತಿಯ ಯಜಮಾನಿಕೆಯ ಪಾತ್ರ. ಜನನಿಗೆ ಗೋಳು ಹೊಯ್ದುಕೊಳ್ಳುತ್ತೇನೆ. ಅದರ ನಡುವೆ ನ್ಯಾಯವನ್ನು ಹೇಳುತ್ತಿರುತ್ತಾನೆ. ಹೆಣ್ಣುಮಕ್ಕಳು ಹೀಗಿರಬೇಕು ಹಾಗಿರಬೇಕು ಎಂದು ನಿರ್ದೇಶಿಸುತ್ತಾನೆ. ಮನೆಗೆ ಹೆಣ್ಣುಮಕ್ಕಳು ಬೇಗ ಬರಬೇಕು. ಸುರಕ್ಷತೆಯಿಂದ ಇರಬೇಕು. ಮನೆಯಿಂದ ಹೊರ ಬರುವಾಗ ಎಚ್ಚರ ಇರಬೇಕು ಹೀಗೆ ಅನೇಕ ನಿರ್ಬಂಧಗಳನ್ನು ಹೇರುತ್ತಾನೆ. ಅವರ ಮನೆಯ ಹೆಣ್ಣುಮಕ್ಕಳಿಗೆ ಅದು ಕಿರಿಕಿರಿ ಆಗುತ್ತದೆ. ಒಟ್ಟಾರೆ ಧರ್ಮರಾಜ್ ಪಾತ್ರ ಅದ್ಭುತ.

◆ **ಧಾರಾವಾಹಿಗಳಲ್ಲಿ ಪಾತ್ರಗಳ ಮಿತಿ ಏನು?**

ಕೆಲಸ ತುಂಬ ಜಾಸ್ತಿ ಇರುತ್ತದೆ. ಸೀನ್‌ಗಳು ತುಂಬ ಹೆಚ್ಚಿರುತ್ತವೆ. ಹೆಚ್ಚು ಒತ್ತಡ ಇರುತ್ತದೆ. ಬೆಳಿಗ್ಗೆ ಏಳೆಂಟು ಗಂಟೆಗೆ ಕೆಲಸ ಆರಂಭಿಸಿದರೆ ರಾತ್ರಿಯ ತನಕ ಮಾಡಬೇಕಾಗುತ್ತದೆ. ಅಭಿನಯದ ವಿಷಯದಲ್ಲಿ ಅಂತಹ ವ್ಯತ್ಯಾಸ ಇರುವುದಿಲ್ಲ. ನಾಟಕದಲ್ಲಿ ವೇದಿಕೆ ದೊಡ್ಡದಾಗಿ ಇದ್ದು, ದೂರದಲ್ಲಿ ಇರುವ ಪ್ರೇಕ್ಷಕನನ್ನು ತಲುಪಲು ಒಂದಿಷ್ಟು ಹೆಚ್ಚಿನ ಕಸರತ್ತು ಬೇಕಾಗುತ್ತದೆ. ಸೀರಿಯಲ್ ಒಂದು ಬಾಕ್ಸ್‌ಗೆ ಸೀಮಿತವಾಗಿ ಮಾಡಬೇಕಾಗುತ್ತದೆ. ಸಮಯದ ಅಭಾವ ಹೆಚ್ಚಿರುತ್ತದೆ. ನಟರಿಗೆ ಮಾತ್ರ ಅಲ್ಲ ನಿರ್ದೇಶಕ, ನಿರ್ಮಾಪಕ, ತಾಂತ್ರಿಕ ವರ್ಗದವರಿಗೂ ಆ ಮಿತಿ ಇರುತ್ತದೆ. ದಿನಕ್ಕೆ ಎರಡು ಮೂರು ಎಪಿಸೋಡ್ ಚಿತ್ರೀಕರಿಸಬೇಕಾಗುತ್ತದೆ. ಸಂಕಲನಕಾರರು ತುಂಬ ಮುತುವರ್ಜಿಯಿಂದ ಕೆಲಸ ಮಾಡುತ್ತಾರೆ. ಕ್ಯಾಮೆರಾ ಕೆಲಸ ಕೂಡ ಸವಾಲಿನಿಂದ ಕೂಡಿರುತ್ತದೆ. ಕಡಿಮೆ ಸಮಯದಲ್ಲಿ ಹಲವರ ಕೆಲಸದಿಂದ ಮೂಡಿಬರುತ್ತದೆ.

◆ **ನಿಮ್ಮ ಇಷ್ಟದ ಮತ್ತು ಕನಸಿನ ಪಾತ್ರದ ಬಗ್ಗೆ ಹೇಳಿ.**

ತೃಪ್ತಿಕೊಡುವ ಪಾತ್ರ ಇನ್ನೂ ಸಿಕ್ಕಿಲ್ಲ. ಅನೇಕ ಪಾತ್ರಗಳು ಹೆಸರನ್ನು ತಂದುಕೊಟ್ಟಿವೆ. ಸ್ಮರಣೀಯ ಪಾತ್ರ ಮಾಡಬೇಕು ಎನ್ನುವ ಕನಸು ಈಗಲೂ ಇದೆ. ಕೆಲವೇ ದಿನಗಳಲ್ಲಿ ಅಂತಹ ಅವಕಾಶ ಸಿಗಬಹುದೆಂದು ಅಂದುಕೊಂಡಿದ್ದೇನೆ. ಅಂತಹ ಪಾತ್ರ ಸೃಷ್ಟಿಸುವ ನಿರ್ದೇಶಕರ ಜೊತೆ ಕೆಲಸ ಮಾಡಬೇಕು ಎನ್ನುವ ಆಸೆ ಇದೆ. ಈಗ ಮಾಡಿರುವುದರಲ್ಲಿ ಅಂತಹ ತೃಪ್ತಿ ಇಲ್ಲ. ಒಳ್ಳೆಯ ಪಾತ್ರಕ್ಕೆ ಅವಕಾಶ ಬರುತ್ತದೆ. ಅದು ದೊಡ್ಡ ತೆರೆಯಲ್ಲೇ ಆಗಬೇಕು. ಏನೋ ಆಗಬೇಕಿತ್ತು, ಏನೂ ಆಗಿಲ್ಲ ಎನ್ನುವ ನೋವು ನನ್ನಲ್ಲಿ ಇದೆ.

■ **ರಾಘವೇಂದ್ರ ಕೆ.**